ಅ) 1988-89ರಲ್ಲಿ ರೂ. 243.65ಲಕ್ಷ ಲಾಭ

1989-90ರಲ್ಲಿ ಲೆಕ್ಕ ಪರಿಶೋಧನೆ ಇನ್ನೂ ಮುಕ್ತಾಯವಾಗಿಲ್ಲ.

ಆ) ಮೈಸೂರು ಸಕ್ಕರೆ ಕಾರ್ಖಾನೆಯು 1988-89 (18 ತಿಂಗಳ ಅವಧಿಗೆ)ರ ಸಾಲಿಗೆ ಮಾತ್ರ ಲಾಭ ಗಳಿಸಿದ್ದು, ಇನ್ನೂ ಸುಮಾರು 69.99 ಲಕ್ಷ ರೂ. ಗಳ ಹಿಂದಿನ ಕೂಡಿಟ್ಟ ಹಾನಿಯನ್ನು 1989-90ರ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪರಿಶೋದನೆ ಇನ್ನೂ ಮುಗಿದಿಲ್ಲವಾದ್ದರಿಂದ ರೈತರಿಗೆ ಆ ಬೋನಸ್ ಹಣ ಪಾವತಿ ಬಗ್ಗೆ ಕ್ರಮ ಕೈಗೊಳ್ಳುವುದು ಸಾಧ್ಯವಾಗಿರುವುದಿಲ್ಲ.

ಇ) ಜಿಲ್ಲೆಯ ಇತರೆ ಕಾರ್ಖಾನೆಗಳು ಸತತವಾಗಿ ಲಾಭಗಳಿಸುತ್ತಿದ್ದು, ಮೈಸೂರು ಸಕ್ಕರೆ ಕಂಪೆನಿ ಕೇವಲ 1988-89ರ ಸಾಲಿಗೆ ಮಾತ್ರ ಲಾಭ ಗಳಿಸಿರುತ್ತದೆ. 1989-90ರ ಲೆಕ್ಕ ಪರಿಶೋಧನೆ ಆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ರಾಜ್ಯಸಚಿವ ಸಂಪುಟದ ಸದಸ್ಯರುಗಳ ಪ್ರವಾಸ ಭತ್ಯೆ

1418-ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸಚಿವರ ಸಂಪುಟದ ಸದಸ್ಯರುಗಳಲ್ಲಿ ಮುಖ್ಯ ಮಂತ್ರಿಗಳು ಸೇರಿದಂತೆ ಡಿಸೆಂಬರ್ 1990ರಿಂದ ಫೆಬ್ರವರಿ 28, 1991ರ ವರೆವಿಗೆ ಪಡೆದುಕೊಂಡಿರುವ ಟಿ.ಎ. ಮತ್ತು ಡಿ.ಎ. ಭತ್ಯೆಗಳ ಮೊತ್ತವೆಷ್ಟು (ಪ್ರತಿಯೊಬ್ಬ ಮಂತ್ರಿ ಮಂಡಲದ ಸದಸ್ಯರುಗಳ ಬಗ್ಗೆ ಪ್ರತ್ಯೇಕವಾಗಿ ತಿಂಗಳುವಾರು ವಿವರಗಳನ್ನು ನೀಡುವುದು)

ಆ) ಮೇಲ್ಕಂಡ ಅವಧಿಯಲ್ಲಿ ಸಚಿವ ಸಂಪುಟದ ಎಲ್ಲಾ ಸದಸ್ಯರುಗಳು ಮಾಡಿರುವ ಪ್ರವಾಸ ಅಧಿಕೃತ ಪ್ರವಾಸವೇ ಅಥವಾ ಖಾಸಗಿ ಪ್ರವಾಸವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) :

ಅ) ರೂ.7,38,148.00

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಅಧಿಕೃತ ಪ್ರವಾಸಗಳು.

ಅನುಬಂಧ

ಕ್ರ. ಸಂ.	*ಸಚಿವರ ಹೆಸರು*	*ಡಿಸೆಂಬರ್ 1990*	*ಜನವರಿ 1991*	*ಫೆಬ್ರವರಿ 1991*
	ಶ್ರೀಯುತರು	ರೂ.ಗಳು	ರೂ.ಗಳು	ರೂ.ಗಳು
1.	ಬಿ. ಬಸವಲಿಂಗಪ್ಪ	16,608	5,138	11,765
2.	ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ	2,620	20,509	34,836.
3.	ಎಂ. ವೀರಪ್ಪ ಮೊಯಿಲಿ	23,304	22,501	47,092
4.	ವಿ. ಮುನಿಯಪ್ಪ	3,398	20,212	22,692
5.	ಎಸ್. ಬಂಗಾರಪ್ಪ	9,277	18,528	32,330
6.	ಬಿ. ಶಿವಣ್ಣ	6,779	16,048	—
7.	ನಜೀರ್ ಅಹ್ಮದ್	5,485	9,225	12,510

8.	ಶ್ರೀಮತಿ ಕೆ.ಎಸ್. ನಾಗರತ್ನಮ್ಮ	7,075	4,063	20,378
9.	ಎ.ಎಸ್. ನಾಡಗೌಡ	10,425	37,860	46,560
10.	ಕೆ.ಜೆ. ಜಾರ್ಜ್	8,097	18,013	—
11.	ಟಿ.ಎನ್. ನರಸಿಂಹಮೂರ್ತಿ	26,915	21,155	11,296
12.	ಕೆ. ಶಿವಮೂರ್ತಿ	2,353	—	11,566
13.	ಎಂ.ಎಲ್. ಉಸ್ತಾದ್	3,125	8,495	15,315
14.	ಅಜೀಜ್ ಸೇಠ್	5,953	10,255	17,577
15.	ಎಂ. ಮಲ್ಲಿಕಾರ್ಜುನ ಖರ್ಗೆ	—	3,822	21,367
16.	ಕೆ.ಎಚ್. ಪಾಟೀಲ್	—	6,869	14,078
17.	ಜಿ. ಪುಟ್ಟಸ್ವಾಮಿಗೌಡ	—	11,744	13,654
18.	ಈಟಿ. ಶಂಬುನಾಥ	—	14,968	11,453
19.	ಧರ್ಮಸಿಂಗ್	—	12,830	—

ರಾಜ್ಯದ ಮಂತ್ರಿಮಂಡಲದ ಸಚಿವರುಗಳ ಮನೆ ಮತ್ತು ಕಛೇರಿ ದುರಸ್ತಿಯ ಬಗ್ಗೆ.

1416 - ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವೆಂಬರ್ ತಿಂಗಳಿನಿಂದ ಇಂದಿನವರೆವಿಗೆ ರಾಜ್ಯದ ಮಂತ್ರಿ ಮಂಡಲದಲ್ಲಿ ಮುಖ್ಯಮಂತ್ರಿಗಳೂ ಸೇರಿದಂತೆ ಸಚಿವರುಗಳ ಮನೆ ಮತ್ತು ಕಛೇರಿಯ ದುರಸ್ತಿ ಹಾಗೂ ಆಧುನೀಕರಣಗೊಳಿಸಲು ಖರ್ಚಾಗಿರುವ ಹಣವೆಷ್ಟು (ಪ್ರತಿಯೊಬ್ಬರ ಮನೆ ಮತ್ತು ಕಛೇರಿಯ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು)?

ಶ್ರೀ ಎಸ್. ಬಂಗಾರಪ್ಪ, (ಮುಖ್ಯಮಂತ್ರಿಗಳು) :

ಅ) ಅನುಬಂಧದಲ್ಲಿ ತೋರಿಸಲಾಗಿದೆ.

ಕ್ರ. ಸಂ.	*ಸಚಿವರ ಹೆಸರು*	*ನಿವಾಸ*	*ಕಛೇರಿ*
1.	ಶ್ರೀ ಎಸ್. ಬಂಗಾರಪ್ಪ ಮುಖ್ಯಮಂತ್ರಿಗಳು	7,74,234-00	1,26,000-00
2.	ಶ್ರೀ ಅಜೀಜ್ ಸೇಠ್ ಸಾರಿಗೆ ಮತ್ತು ವಕ್ಫ್ ಸಚಿವರು	—	—
3.	ಶ್ರೀ ಬಿ. ಬಸವಲಿಂಗಪ್ಪ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಸಚಿವರು	—	—
4.	ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು	—	—
5.	ಶ್ರೀ ಕೆ.ಎಚ್. ಪಾಟೀಲ್ ಸಹಕಾರ ಸಚಿವರು	—	—